6) ಮೂಡಿಗೆರೆ ತಾಲ್ಲೂಕಿನಲ್ಲಿ ಭಗಿನಿ ಸೇಂದಿ ಸೇವನೆಗೆ ಅವಕಾಶ ಮಾಡಿಕೊಡುವುದು.

ಶ್ರೀಮತಿ ಮೋಟಮ್ಮ :– ಮಾನ್ಯ ಉಪಾಧ್ಯಕ್ಷೆಣಿಯವರೇ, ಮೂಡಿಗೆರೆ ತಾಲ್ಲೂಕಿನಲ್ಲಿ ಕಳ್ಳಬಟ್ಟಿ ಸಾರಾಯಿಯನ್ನು ಮನೆಮನೆಗಳಲ್ಲಿ ತಯಾರಿಸಿ 15 ವರ್ಷದ ಹುಡುಗರಿಂದ ವಯಸ್ಸಾದವರ ತನಕ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಾಗಿ ಸೇವಿಸುತ್ತಿರುವುದರಿಂದ ಅವರ ಆರೋಗ್ಯದ ಬಗ್ಗೆ ಕೆಟ್ಟ ಪರಿಣಾಮ ಬೀರಿ ಅವರ ಸರ್ವನಾಶವಾಗುತ್ತಿದೆ. ಇದಕ್ಕೆ ಬದಲಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವಾನಿಗೆ ಕೊಟ್ಟಿರುವಂತೆ ಈ ಕುಡಿತಕ್ಕೆ ಬದಲಾಗಿ "ಭಗಿನಿ ಸೇಂದಿ" ಯನ್ನು ಕುಡಿಯಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು) :– ಮಾನ್ಯ ಉಪಾಧ್ಯಕ್ಷಣಿಯವರೇ, ಕರ್ನಾಟಕ ರಾಜ್ಯದಲ್ಲಿ ಶೇಂದಿಯ ತಯಾರಿಕೆ ಮತ್ತು ಕುಡಿತವನ್ನು ನಿಷೇದಿಸಬೇಕೆಂಬ ಸರ್ಕಾರದ ಧ್ಯೇಯಕ್ಕೆ ಅನುಗುಣವಾಗಿ ಚಿಕ್ಕಮಗಳೂರು ಜಿಲ್ಲೆಯಾದ್ಯಂತ 1988 ರಿಂದ ಶೇಂದಿ ಮಾರಾಟವನ್ನು ನಿಷೇಧಿಸಲಾಯಿತು.

ಕಳ್ಳಬಟ್ಟಿ ತಯಾರಿಕೆ ಮತ್ತು ಮಾರಾಟದ ಪ್ರಕರಣಗಳು ಮೂಡಿಗೆರೆ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಕಂಡು ಬಂದಿವೆಯೋ ಆ ಬಗ್ಗೆ ಇಲಾಖೆಯು ಕ್ರಮ ಜರುಗಿಸಿದೆ.

ಶಾಸನ ರಚನಾ ಕಾರ್ಯ ಕಲಾಪಗಳು

1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಾರಿಗೆ ಹಾಗೂ ವಕ್ಫ್ ಮಂತ್ರಿಗಳ ಪರವಾಗಿ, 1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ, "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) :– ಮಾನ್ಯ ಉಪಾಧ್ಯಕ್ಷರೆ, 1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು :– ವಿಧೇಯಕವನ್ನು ಮಂಡಿಸಲಾಯಿತು. (Annexare I)

ಪರ್ಯಾಲೋಚನಾ ಪ್ರಸ್ತಾವ

1990 ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ) :– ಮಾನ್ಯ ಉಪಾಧ್ಯಕ್ಷರೇ, 1990 ನೇ ಇಸವಿಯ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :– ಅಧ್ಯಕ್ಷರೆ, ಇದನ್ನು ನಾಳೆ ತೆಗೆದುಕೊಂಡರೆ ಒಳ್ಳೆಯದು. ಇದನ್ನು ನೋಡಲಿಕ್ಕೆ ಸಾಧ್ಯವಾಗಿಲ್ಲ. ಬೇಕಾದರೆ ಕಾಂಟ್ರಾಕ್ಟ್ ಕ್ಯಾರಿಯೇಜಸ್ ಅನ್ನು ತೆಗೆದುಕೊಂಡು ಪಾಸ್ ಮಾಡಿ.

ಉಪಾಧ್ಯಕ್ಷರು :– ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ :– ಅದರಲ್ಲಿ ಏನೂ ಇಲ್ಲ. ಅದನ್ನು ಬೇಕಾದರೆ ನಾಳೆ ತೆಗೆದುಕೊಳ್ಳಿ. ಆದರೆ ಈ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ನಾವು ಕೆಲವು ಸಲಹೆಗಳನ್ನು ಮಾಡಬೇಕಾಗಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನೇ ನಮಗೆ ಸಿಗುತ್ತಿಲ್ಲ. We are not getting the copy of the Land Revenue Act; that is the problem.